# ಕೋವಿಡ್-19 ಜನಜಾಗೃತಿ ಮತ್ತು ಪರಿಹಾರ ಆಂದೋಲನ
# COVID -19 RELIEF AND AWARENESS CAMPAIGN

ಕೋವಿಡ್-19ರ ಸಾಂಕ್ರಮಿಕ ಸೋಂಕು ಕಾಯಿಲೆ ಬಂದ ನಂತರ ಜನಜೀವನ ಅಸ್ತವ್ಯಸ್ತವಾಗಿದ್ದು, ಇದರ ಪರಿಣಾಮವಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಕೊರತೆಯಿಂದಾಗಿ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿರುತ್ತದೆ. ಅದರಲ್ಲೂ ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಆರೋಗ್ಯ ಹಾಗೂ ಕಲಿಕೆಯ ಮೇಲೂ ಪರಿಣಾಮ ಬೀರಿರುವುದು ಗಮನಾರ್ಹ ಅಂಶವಾಗಿದೆ.

ಭಾರತದಲ್ಲಿ ಸದ್ಯ ಕೋವಿಡ್-19ರ ಅಲೆಗಳಿಂದಾಗಿ ಸೋಂಕಿನ ಪ್ರಮಾಣ ಏರಿಳಿತವಾಗುತ್ತಿದೆ. ಇದರ ನಿಯಂತ್ರಣಕ್ಕಾಗಿ ಜನರಿಗೆ ಲಸಿಕೆ ನೀಡುವ ಕಾರ್ಯ ವೇಗವಾಗಿ ನಡೆಯುತ್ತಿದೆ. ಈಗ ಲಭ್ಯವಿರುವ ಲಸಿಕೆಗಳು ಕೊರೊನಾ ವೈರಸ್ ಹರಡುವಿಕೆಯನ್ನು ಕಡಿಮೆ ಮಾಡುವ ಸಾಮರ್ಥ್ಯ ಹೊಂದಿವೆ. ಶೇ. 60 – ಶೇ.70 ಜನರು ಎರಡೂ ಡೋಸ್ ಲಸಿಕೆ ಪಡೆದರೆ, ವೈರಸ್ ಹರಡುವಿಕೆಯನ್ನು ತಡೆಯಬಹುದು. ಲಸಿಕೆಯ ಅನಂತರ, ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಲಸಿಕೆ ಪಡೆದ ಜನರು ಕೋವಿಡ್‌ಗೆ ಸೋಂಕಿಗೆ ಒಳಗಾದರೂ ರೋಗದ ತೀವ್ರತೆ ಕಡಿಮೆಯಾಗುತ್ತದೆ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಆದರೂ ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅನೇಕ ಸಂದೇಹ ಹಾಗೂ ತಪ್ಪು ಮಾಹಿತಿಗಳಿವೆ.

ಪಡಿ ಸಂಸ್ಥೆಯು ಕಳೆದೆರಡು ವರ್ಷಗಳಿಂದ ಕೋವಿಡ್-19 ಸಾಂಕ್ರಾಮಿಕ ಹರಡದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಜನಜಾಗೃತಿ ಹಾಗೂ ಸೋಂಕಿನಿಂದ ನೊಂದವರಿಗೆ ಪರಿಹಾರ ನೀಡುವ ಮತ್ತು ಸುಧಾರಣಾ ಅಂಶಗಳ ಬಗೆಗಿನ ಸಮೀಕ್ಷೆಗಳನ್ನು ನಡೆಸುತ್ತಿದ್ದು ಆಂದೋಲನದ ಮೂಲಕ ಶ್ರಮಿಸುತ್ತಾ ಇದೆ. ಇದಕ್ಕಾಗಿ ಸಮುದಾಯದಲ್ಲಿ ಕೋವಿಡ್ ಲಸಿಕೆ ಬಗ್ಗೆ ಜಾಗೃತಿ ಮೂಡಿಸುವ ಮತ್ತು ವೈಜ್ಞಾನಿಕ ಉತ್ತರಗಳನ್ನು ಅರಿತುಕೊಳ್ಳುವ ಮಾಹಿತಿಯನ್ನು ಜನಸಾಮಾನ್ಯರ ಅರಿವಿಗಾಗಿ ಪ್ರಕಟಿಸುತ್ತದೆ.

## ಕೋವಿಡ್-19 ಲಸಿಕೆ ತಪ್ಪು ತಿಳುವಳಿಕೆಗಳು ಮತ್ತು ವೈಜ್ಞಾನಿಕ ಉತ್ತರಗಳು

ಕೋವಿಡ್-19 ಸಾಮಾನ್ಯ ಜ್ವರ. ಅದಕ್ಕೆ ಲಸಿಕೆಯ ಅಗತ್ಯವಿದೆಯೇ?

**ಬಹಳಷ್ಟು ಜನರು ಕೋವಿಡ್-19 ಅನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಅದನ್ನು ಸಾಮಾನ್ಯ ಜ್ವರವೆಂದು ತಿಳಿಯುತ್ತಾರೆ. ಅನೇಕ ಸಂದರ್ಭಗಳಲ್ಲಿ ಕೋವಿಡ್‌ನ ತೀವ್ರತೆ ಕಡಿಮೆಯಾಗಿರಬಹುದು. ಆದರೆ ಅದು ತೀವ್ರ ಸ್ವರೂಪಕ್ಕೆ ಬಂದಾಗ, ಆರೋಗ್ಯ ಸಮಸ್ಯೆಗಳೊಂದಿಗೆ ಜೀವ ಹಾನಿಗೂ ಕಾರಣವಾಗಬಹುದು. ಆದ್ದರಿಂದ ಕೋವಿಡ್ ಲಸಿಕೆಗಳನ್ನು ತಪ್ಪದೇ ಹಾಕಿಸಿಕೊಳ್ಳಬೇಕು.**

ಕೋವಿಡ್ ಲಸಿಕೆಯಿಂದಾಗಿ ತೀವ್ರ ಅಡ್ಡ ಪರಿಣಾಮ ಉಂಟಾಗುತ್ತದೆಯೇ?

**ಯಾವುದೇ ರೀತಿಯ ಲಸಿಕೆಯನ್ನು ಪಡೆದ ಬಳಿಕ ಜ್ವರ, ಆಯಾಸ, ಚುಚ್ಚುಮದ್ದಿನ ಸ್ಥಳದಲ್ಲಿ ನೋವು – ಹೀಗೆ ಸ್ವಲ್ಪ ಮಟ್ಟಿನ ಅಡ್ಡ ಪರಿಣಾಮ ಕಂಡು ಬರುತ್ತದೆ. ಕೋವಿಡ್ ಲಸಿಕೆ ಪಡೆದ**

ಬಳಿಕವೂ ಜ್ವರ, ಆಯಾಸ, ವಾಂತಿಬೇಧಿ, ತಲೆನೋವಿನಂತಹ ಅಡ್ಡಪರಿಣಾಮಗಳು ಒಂದೆರಡು ದಿನ ಇರುತ್ತವೆ. ಕೆಲವರಲ್ಲಿ ಲಸಿಕೆ ಪಡೆದ ಬಳಿಕ ಯಾವುದೇ ರೀತಿಯ ಅಡ್ಡ ಪರಿಣಾಮ ಕಂಡು ಬರುವುದಿಲ್ಲ. ಹಾಗೆಂದ ಮಾತ್ರಕ್ಕೆ ಆ ಲಸಿಕೆಗಳು ಪರಿಣಾಮಕಾರಿಯಾಗಿಲ್ಲ ಎಂದು ಅರ್ಥವಲ್ಲ. ಒಂದು ವೇಳೆ ಮೊದಲ ಡೋಸ್ ಪಡೆದ ಬಳಿಕ ತೀವ್ರ ಆರೋಗ್ಯ ತೊಂದರೆ ಆಗಿದ್ದಲ್ಲಿ ಎರಡನೇ ಡೋಸ್ ಪಡೆಯುವ ಮೊದಲು ವೈದರ ಸಲಹೆ ಪಡೆಯಬೇಕು.

ಕೋವಿಡ್ ಲಸಿಕೆ ಪಡೆದ ಬಳಿಕ ಕೋವಿಡ್ ಸೋಂಕಿನ ಅಪಾಯ ಇದೆಯೇ?

ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದ ಅನಂತರವೂ ಸೋಂಕು ಉಂಟಾಗಬಹುದು. ಆದರೆ, ಅಂತಹ ಸಂದರ್ಭಗಳಲ್ಲಿ ರೋಗದ ತೀವ್ರತೆ ಕಡಿಮೆಯಾಗಿರುತ್ತದೆ. ಗಂಭೀರ ಕಾಯಿಲೆಯ ಸಾದ್ಯತೆಗಳು. ಆಸ್ಪತೆಗೆ, ಐಸಿಯು. ಗೆ ದಾಖಲಾಗುವ ಸಾಧ್ಯತೆ ಬಹುತೇಕ ಕಡಿಮೆ ಇರುತ್ತದೆ.

ಒಂದು ಬಾರಿ ಕೋವಿಡ್ ಲಸಿಕೆ ಪಡೆದರೆ ಜೀವನಪೂರ್ತಿ ಸುರಕ್ಷಿತವಾಗಿರಬಹುದೇ?

ಕೋವಿಡ್–19 ಒಂದು ಹೊಸ ರೋಗ. ಇದು ಕೇವಲ ಒಂದೂವರೆ ವರ್ಷಗಳ ಹಿಂದಷ್ಟೇ ಕಾಣಿಸಿಕೊಂಡಿದೆ. ಲಸಿಕೆ ನೀಡಿಕೆಯೂ ಕೇವಲ 6 ತಿಂಗಳಿಂದ ಈಚೆಗಷ್ಟೇ ಆರಂಭವಾಗಿದೆ. ಇತರ ಎಲ್ಲ ಲಸಿಕೆಗಳಂತೆ, ಇದರ ರೋಗ ನಿರೋಧಕತೆಯೂ ಕನಿಷ್ಠ ಆರು ತಿಂಗಳಿನಿಂದ ಒಂದು ವರ್ಷದವರೆಗೆ ಇದ್ದು, ಲಸಿಕೆ ಪಡೆದ ಎಲ್ಲ ವ್ಯಕ್ತಿಗಳು ಆರು ತಿಂಗಳಿಂದ ಒಂದು ವರ್ಷದವರೆಗೆ ಸುರಕ್ಷಿತವಾಗಿರುತ್ತಾರೆ ಎಂಬುದು ಈವರೆಗಿನ ವೈಜ್ಞಾನಿಕ ಅಧ್ಯಯನದಲ್ಲಿ ಕಂಡು ಬಂದಿದೆ.

ಮಕ್ಕಳು ಕೋವಿಡ್ ಸೋಂಕಿಗೆ ತುತ್ತಾಗುವುದಿಲ್ಲ, ಹಾಗಾಗಿ ಅವರಿಗೆ ಲಸಿಕೆಯ ಅಗತ್ಯವಿದೆಯೇ?

ಮಕ್ಕಳಿಗೆ ಸೋಂಕು ಉಂಟಾಗಬಹುದು, ಆದರೆ ಅವರು ತೀವ್ರ ಅನಾರೋಗ್ಯಕ್ಕೆ ಒಳಗಾಗುವುದಿಲ್ಲ. ಮಕ್ಕಳಿಗೆ ಲಸಿಕೆ ಹಾಕುವ ಬಗ್ಗೆ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. 2 ರಿಂದ 18 ವರ್ಷ ವಯಸ್ಸಿನ ಮಕ್ಕಳ ಮೇಲೆ ಕೊವಾಕ್ಸಿನ್ ಲಸಿಕೆಯ ಅಧ್ಯಯನ ಪ್ರಾರಂಭಿಸಲಾಗಿದೆ.

ಕೋವಿಡ್ ಲಸಿಕೆ ಪಡೆಯುವುದರಿಂದ ಬಂಜೆತನ ಉಂಟಾಗುತ್ತದೆಯೇ?

ಲಸಿಕೆ ಪಡೆಯುವುದರಿಂದ ಯಾವುದೇ ರೀತಿಯ ಬಂಜೆತನ ಉಂಟಾಗುವುದಿಲ್ಲ.

ತೀವ್ರ ಆರೋಗ್ಯ ಸಮಸ್ಯೆ ಹೊಂದಿರುವವರು ಕೋವಿಡ್ ಲಸಿಕೆ ಪಡೆಯಬಹುದೇ?

ರಕ್ತದೊತ್ತಡ, ಮಧುಮೇಹ, ಮೂತ್ರಪಿಂಡ ಕಾಯಿಲೆ, ಹೃದಯ ಸಂಬಂಧಿ ಖಾಯಿಲೆ ಹೀಗೆ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವವರು ತೀವ್ರ ಕೋವಿಡ್ ಸೋಂಕಿಗೆ ತುತ್ತಾಗುವ ಸಂಭವ ಹೆಚ್ಚಿರುವುದರಿಂದ ಕಡ್ಡಾಯವಾಗಿ ಕೋವಿಡ್ ಲಸಿಕೆಯನ್ನು ಪಡೆದುಕೊಳ್ಳಬೇಕು.

ಕೋವಿಡ್ ಲಸಿಕೆಯ ಎರಡು ಡೋಸ್‌ನ್ನು ಯಾವಾಗ ಪಡೆಯಬಹುದು?

ಯಾವುದೇ ಲಸಿಕೆಯಾದರೂ ಡೋಸ್‌ಗಳ ನಡುವೆ ಕನಿಷ್ಟ 4 ವಾರಗಳ ಅಂತರವಿರುತ್ತದೆ. ಅದರಂತೆ ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರ ಈ ಹಿಂದೆ 6–8 ವಾರಗಳಿದ್ದು ಪ್ರಸ್ತುತ ಲಸಿಕೆಯ ಬಗೆಗಿನ ವೈಜ್ಞಾನಿಕ ವರದಿಗಳನ್ನು ಆಧರಿಸಿ ಎರಡು ಡೋಸ್‌ಗಳ ನಡುವಿನ ಅಂತರವನ್ನು 12–16 ವಾರಗಳಿಗೆ ವಿಸ್ತರಿಸಲಾಗಿದೆ. ವಿದೇಶಕ್ಕೆ ಪ್ರಯಾಣ ಮಾಡುವವರಿಗೆ ಮಾತ್ರ ಕೋವಿಶೀಲ್ಡ್ ಲಸಿಕೆಯ 2 ಡೋಸ್‌ಗಳ ನಡುವಿನ ಅಂತರವನ್ನು 4 ವಾರಕ್ಕೆ ಇಳಿಸಲಾಗಿದೆ.

ವಿದೇಶ ಪ್ರಯಾಣ ಮಾಡುವವರು ತಮ್ಮ ಸಮೀಪದ ಸರಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ದಾಖಲೆಗಳನ್ನು ತೋರಿಸಿ ಲಸಿಕೆ ಪಡೆಯಬಹುದಾಗಿದೆ. ಮೊದಲ ಬಾರಿ ಪಡೆದ ಲಸಿಕೆಯನ್ನೇ ಎರಡನೇ ಬಾರಿಯೂ ತೆಗೆದುಕೊಳ್ಳಬೇಕು. ಮೊದಲ ಬಾರಿ ಕೋವಿಶೀಲ್ಡ್ ಲಸಿಕೆ ಪಡೆದು ಎರಡನೇ ಡೋಸ್ ಕೊವಾಕ್ಸಿನ್ ಪಡೆಯುವಂತಿಲ್ಲ.

ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡ ಕೂಡಲೆ ಲಸಿಕೆ ಪಡೆಯಬಹುದೇ?

ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡವರು 90 ದಿನಗಳ ಬಳಿಕ ಕೋವಿಡ್ ಲಸಿಕೆ ಪಡೆಯಬಹುದಾಗಿದೆ. ಒಂದು ವೇಳೆ ಮೊದಲ ಡೋಸ್ ಲಸಿಕೆ ಪಡೆದ ಬಳಿಕ ಕೋವಿಡ್ ಸೋಂಕಿಗೆ ತುತ್ತಾದರೆ 90 ದಿನಗಳ ಬಳಿಕ 2ನೇ ಡೋಸ್ ಪಡೆಯಬಹುದಾಗಿದೆ.

ಕೋವಿಡ್ ಲಸಿಕೆ ಪಡೆದರೆ ರಕ್ತದಾನ ಮಾಡಬಹುದೇ?

ಕೋವಿಡ್ ಲಸಿಕೆ ಪಡೆದ ಆರೋಗ್ಯವಂತ ವ್ಯಕ್ತಿಯು ಲಸಿಕೆ ಪಡೆದ 15 ದಿನಗಳ ಬಳಿಕ ರಕ್ತದಾನ ಮಾಡಬಹುದಾಗಿದೆ.

ಋತುಸ್ರಾವದ ಅವಧಿಯಲ್ಲಿ ಕೋವಿಡ್ ಲಸಿಕೆ ಪಡೆದರೆ ಋತುಚಕ್ರದಲ್ಲಿ ಏರುಪೇರು ಉಂಟಾಗುತ್ತದೆಯೇ?

ಮಹಿಳೆಯರು ತಮ್ಮ ಋತುಸ್ರಾವದ ಅವಧಿಯಲ್ಲೂ ಲಸಿಕೆಯನ್ನು ತೆಗೆದುಕೊಳ್ಳಬಹುದಾಗಿದೆ. ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ.

ಕೊರೊನಾ ವೈರಸ್‌ನಿಂದ ನಮ್ಮನ್ನು ಕುಟುಂಬವನ್ನು ಮತ್ತು ಸಮಾಜವನ್ನು ರಕ್ಷಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ. 'ಲಸಿಕೆ' ಎಂಬುದು ರೋಗದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಇರುವ ಒಂದು ಮಾರ್ಗ. ರೂಪಾಂತರಿ ಕೊರೊನಾದ ಹೊಸ ವೈರಸ್‌ಗಳು ಪತ್ತೆಯಾಗುತ್ತಲೇ ಇವೆ. ಹಾಗಾಗಿ ಈ ಸೋಂಕು ಏಕಾಏಕಿ ನಿಯಂತ್ರಣಕ್ಕೆ ಬರಲು ಸಾಧ್ಯವಿಲ್ಲ. ಆದ್ದರಿಂದ ಈ ವೈರಸ್ ಹರಡುವುದನ್ನು ಕಡಿಮೆ ಮಾಡಲು ಪ್ರತಿಯೊಬ್ಬರೂ ತಪ್ಪದೇ ಲಸಿಕೆ ಪಡೆಯಬೇಕು. ಲಸಿಕೆ ಪಡೆಯದಿದ್ದರೆ ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಹಾಗೂ ಸಾವಿನ ಪ್ರಮಾಣ ಹೆಚ್ಚಾಗುತ್ತದೆ. ಲಸಿಕೆ ಪಡೆದ ಅನಂತರವೂ ಕೋವಿಡ್ ನಿಯಮಗಳಾದ ಸಾಮಾಜಿಕ ಅಂತರ ಪಾಲನೆ, ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಮೂಲಕ ಕೈಗಳನ್ನು ಶುಚಿಗೊಳಿಸುವುದು ಹಾಗೂ ಸರಕಾರವು ಕೋವಿಡ್ ಸೋಂಕು ಹರಡುವುದನ್ನು ತಡೆಗಟ್ಟಲು ರೂಪಿಸಿರುವ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.

## ಗರ್ಭಿಣಿ ಹಾಗೂ ಎದೆಹಾಲು ನೀಡುತ್ತಿರುವ ಮಹಿಳೆಯರಿಗೆ ಕೋವಿಡ್ ಲಸಿಕೆಗಳು

ಗರ್ಭಿಣಿ ಮಹಿಳೆಯರು ಕೋವಿಡ್ ಲಸಿಕೆ ಪಡೆಯಬಹುದೇ?

ಗರ್ಭಿಣಿ ಮಹಿಳೆಯರು ಕೋವಿಡ್ ಲಸಿಕೆ ತಮ್ಮ ಗರ್ಭಾವಸ್ಥೆಯ ಯಾವುದೇ ತಿಂಗಳಲ್ಲಿ ಪಡೆಯಬಹುದು.

ಒಂದು ಡೋಸ್ ಲಸಿಕೆ ಪಡೆದ ಬಳಿಕ ಗರ್ಭಿಣಿಯಾದಲ್ಲಿ ಅವರು ತಮ್ಮ ಗರ್ಭಾವಸ್ಥೆಯನ್ನು ಮುಂದುವರಿಸಬಹುದೇ?

**ಮಹಿಳೆಯರು ಒಂದು ಡೋಸ್ ಲಸಿಕೆ ಪಡೆದ ಬಳಿಕ ಗರ್ಭಿಣಿಯಾದಲ್ಲಿ ಅವರು ತಮ್ಮ ಗರ್ಭಾವಸ್ಥೆಯನ್ನು ಮುಂದುವರೆಸಬಹುದಾಗಿದೆ. ಲಸಿಕೆಯಿಂದಾಗಿ ಗರ್ಭದಲ್ಲಿರುವ ಮಗುವಿನ ಬೆಳವಣಿಗೆಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ.**

ಹೆರಿಗೆಯಾದ ಬಳಿಕ ಕೋವಿಡ್ ಲಸಿಕೆ ಪಡೆದರೆ ಮಗುವಿಗೆ ಎದೆ ಹಾಲು ನೀಡಬಹುದೇ?

**ಹೆರಿಗೆಯಾದ ಬಳಿಕ ಕೋವಿಡ್ ಲಸಿಕೆ ಪಡೆಯುವುದರಿಂದ ತಾಯಿಗಾಗಲೀ ಮಗುವಿಗಾಗಲೀ ಯಾವುದೇ ರೀತಿಯ ತೊಂದರೆ ಇಲ್ಲ. ಎದೆಹಾಲು ಉಣಿಸುವ ತಾಯಂದಿರು ಲಸಿಕೆಯನ್ನು ಪಡೆಯಬಹುದಾಗಿದೆ. ಲಸಿಕೆ ಪಡೆಯುವ ಸಲುವಾಗಿ ಎದೆಹಾಲು ನೀಡುವುದನ್ನು ನಿಲ್ಲಿಸಬೇಕಾಗಿಲ್ಲ. ಲಸಿಕೆ ಪಡೆದ ಬಳಿಕವೂ ಎದೆಹಾಲು ನೀಡಬಹುದಾಗಿದೆ.**

ಆರೋಗ್ಯ ಸಮಸ್ಯೆ ಹೊಂದಿರುವ ಗರ್ಭಿಣಿ ಮಹಿಳೆಯರು ಕೋವಿಡ್ ಲಸಿಕೆ ಪಡೆಯುವುದು ಸೂಕ್ತವೇ?

**ಗರ್ಭಿಣಿಯರಲ್ಲಿ ಕಂಡು ಬರುವ ಅಧಿಕ ರಕ್ತದೊತ್ತಡ, ಮಧುಮೇಹ, ರಕ್ತಹೀನತೆ ಮುಂತಾದ ಹೆಚ್ಚಿನ ಅಪಾಯ ಇರುವ ಗರ್ಭಿಣಿಯರಿಗೆ ಕೊವಾಕ್ಸಿನ್ ಲಸಿಕೆಯನ್ನು ಶಿಫಾರಸ್ಸು ಮಾಡಲಾಗಿದೆ. ಕಡಿಮೆ ಅಪಾಯ ಹೊಂದಿರುವ ಗರ್ಭಿಣಿಯರಿಗೆ ಕೊವಿಶೀಲ್ಡ್ ಲಸಿಕೆ ಶಿಫಾರಸ್ಸು ಮಾಡಲಾಗಿದ್ದು, ಮೂರ್ಛೆರೋಗ ಹೊಂದಿರುವ ತಾಯಂದಿರು ಮತ್ತು ಹೃದ್ರೋಗದ ಸಮಸ್ಯೆ ಇರುವ ತಾಯಂದಿರಿಗೆ ವೈದರ ಸಲಹೆಯ ಅನಂತರ ವೈದ್ಯಕೀಯ ಕಾಲೇಜಿನಲ್ಲಿ ಲಸಿಕೆ ಹಾಕಬೇಕು. ಸಾಮಾನ್ಯ ಜನರಿಗೆ ಹಾಗೂ ಗರ್ಭಿಣಿ ಮತ್ತು ಎದೆಹಾಲು ಉಣಿಸುತ್ತಿರುವ ತಾಯಂದಿರಿಗೆ ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಯ 2 ಡೋಸ್‌ಗಳ ನಡುವಿನ ಅಂತರದಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ.**

ಗರ್ಭಿಣಿಯರು ಒಂದೇ ದಿನ Tetanus & Diptheria (ಟಿ.ಡಿ) ಹಾಗೂ ಕೋವಿಡ್ ಲಸಿಕೆ ಪಡೆಯಬಹುದೇ?

**ಗರ್ಭಿಣಿಯರಿಗೆ ನೀಡಲಾಗುವ ಟಿ.ಡಿ ಮತ್ತು ಕೋವಿಡ್ ಲಸಿಕೆಗಳನ್ನು ಒಂದೇ ದಿನದಲ್ಲಿ ನೀಡಬಹುದು. ಆದರೆ ಬೇರೆ ಬೇರೆ ಕೈಗಳಿಗೆ ನೀಡಬೇಕಾಗುತ್ತದೆ.**

**ಕೃಪೆ :** ಜುಲೈ 25, 2021ರ ಉದಯವಾಣಿ ಪತ್ರಿಕೆಯ ಆರೋಗ್ಯವಾಣಿ ಭಾಗದ ಆಯ್ದಭಾಗ

**ಲೇಖನ:** ಮುಖ್ಯಸ್ಥರು, ಸಮುದಾಯ ವೈದ್ಯಕೀಯ ವಿಭಾಗ, ಕೆಎಂಸಿ ಆಸ್ಪತ್ರೆ, ಮಾಹೆ, ಮಣಿಪಾಲ

ಪ್ರಕಟಣೆ : **ಪಡಿ, ಮಂಗಳೂರು**

**ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಯೋಜನೆ 2020–2023**

**(ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಮೇಲುಸ್ತುವಾರಿಗಾಗಿ ಎಸ್‌ಡಿಎಂಸಿ ಸಬಲೀಕರಣ)**